ಗಳನ್ನು ನಿವಾರಿಸುವ ಕೆಲಸವನ್ನು ಮಾಡಿ, ಅದಕ್ಕೆ ಉಪಕಾರವನ್ನೇ ಮಾಡಿದಂತಾಗಿದೆ. ತತ್ತ್ವಶಾಸ್ತ್ರ, ವಿಜ್ಞಾನ, ದೇವತಾಶಾಸ್ತ್ರ (theology) ಇವೆಲ್ಲ ಜೊತೆಯಾಗಿ ವಿಕಸನಹೊಂದಿದ ಗ್ರೀಕ್-ರೋಮನ್ ವಿದ್ವಾಂಸರಿಂದ ಆರಂಭಿಸಿ, ಪುನರುತ್ಥಾನ ಹಾಗೂ ವಿವಿಧ ಸಾಮಾಜಿಕ-ರಾಜಕೀಯ ಕ್ರಾಂತಿಗಳ ಮೂಲಕ ವೈಜ್ಞಾನಿಕ ಅನ್ವೇಷಣೆ ಸಾಗಿಬಂತು; ಪಶ್ಚಿಮದಲ್ಲಿ ಧರ್ಮದ ಅನೇಕ ಮೂಢ ನಂಬಿಕೆಗಳನ್ನು ಅದು ಬಯಲು ಮಾಡಿತು. ಅದರ ಪ್ರಭಾವ ಸಹಜವಾಗಿ ಪ್ರಪಂಚದ ಇತರ ದೇಶಗಳಿಗೂ, ಭಾರತಕ್ಕೂ ಹಬ್ಬಿತು. ನೂತನ ವೈಜ್ಞಾನಿಕ ವಿಚಾರಗಳ ಬೆಳಕಿನಲ್ಲಿ ಹೊಸದಾಗಿ ಧರ್ಮವನ್ನು ಅರಿತು ಕೊಳ್ಳುವ ಹಾಗೂ ವಿಶ್ಲೇಷಿಸುವ ಕಾರ್ಯ ಎಲ್ಲ ಧರ್ಮಗಳಲ್ಲೂ ನಡೆಯಿತು; ಅದರಲ್ಲೂ ಭಾರತದಲ್ಲಿ ೧೯-೨೦ನೇ ಶತಮಾನದಲ್ಲಿ ನಡೆದ ಧಾರ್ಮಿಕ ಪುನರುತ್ಥಾನ ನೂತನ ಧಾರ್ಮಿಕ ಜಾಗೃತಿಗೆ ಕಾರಣವಾಯಿತು.

ಪಶ್ಚಿಮದಲ್ಲಿ ನಡೆದಂತೆ ಇಲ್ಲೂ ವೈಜ್ಞಾನಿಕ ದೃಷ್ಟಿಯಿಂದ ಧರ್ಮವನ್ನು ಖಂಡಿಸುವ, ಧರ್ಮದ ಅಗತ್ಯವನ್ನೇ ನಿರಾಕರಿಸುವ ಪ್ರವೃತ್ತಿ ಬೆಳೆದುಬಂದರೂ, ಇಲ್ಲಿನ ಸಾಂಸ್ಕೃತಿಕ, ಧಾರ್ಮಿಕ ಪರಂಪರೆಯಲ್ಲೇ ಹುಟ್ಟಿಬಂದ ಹಲವು ಮಂದಿ ಧಾರ್ಮಿಕ ಸುಧಾರಕರ ಜೀವನ, ದರ್ಶನಗಳ ಪ್ರಭಾವದ ಮುಂದೆ ಆ ಪ್ರವೃತ್ತಿ ಮಂಕಾಯಿತು ಎನ್ನಬೇಕು. ಸಾಮಾಜಿಕ, ಆರ್ಥಿಕ ಧ್ರುವೀಕರಣಗಳು ನಗರ ಜೀವನವನ್ನು ಪ್ರಭಾವಿಸಿದ್ದರ ಪರಿಣಾಮವಾಗಿಯೂ, ಸಮೂಹ ಮಾಧ್ಯಮಗಳ ಪ್ರಭಾವವು ಸಾಂಪ್ರದಾಯಿಕತೆಯನ್ನು ಕುಗ್ಗಿಸಿದ್ದರಿಂದಲೂ, ಇತ್ತೀಚೆಗೆ ನಾಸ್ತಿಕ ವಿಚಾರಧಾರೆಗಿಂತ ನಿರಾಸಕ್ತ ಜಡ ಪ್ರವೃತ್ತಿ ಅಧಿಕವಾಗುತ್ತಿದೆಯೆನ್ನಬೇಕು. ಆದರೆ, ವೈಜ್ಞಾನಿಕ ದೃಷ್ಟಿಯ ಅನ್ವೇಷಕರಲ್ಲಿ ಕೆಲವರು ವೈಯಕ್ತಿಕ ಪ್ರಯತ್ನಗಳ ಮೂಲಕ ಧರ್ಮದ ಮೂಲಸ್ವರೂಪವನ್ನು ಕಂಡುಕೊಳ್ಳಲು ಯತ್ನಿಸುತ್ತಿರುವುದು ಅತ್ಯಂತ ಸಮಾಧಾನಕರವಾದ ಅಂಶವಾಗಿದೆ.

## ೫. ಮುಂದಿನ ನೋಟ

ಸ್ವಾಮಿ ವಿವೇಕಾನಂದರು ಧರ್ಮವನ್ನು ವೈಜ್ಞಾನಿಕ ದೃಷ್ಟಿಕೋನದಿಂದ ವಿವರಿಸುವ, ವೈಜ್ಞಾನಿಕವಾಗಿ ಅನುಷ್ಠಾನಗೊಳಿಸುವ ಒಂದು ಮಾರ್ಗವನ್ನು ತೋರಿಸಿಕೊಟ್ಟರು. ನೂರೈವತ್ತು ವರ್ಷಗಳಿಗೆ ಹಿಂದೆ ಆ ದೃಷ್ಟಿಕೋನ ಎಷ್ಟು ನೂತನವಾಗಿತ್ತೋ, ಇಂದಿನ ಸಂದರ್ಭದಲ್ಲೂ ಅದು ಅಷ್ಟೇ ನೂತನವಾಗಿದೆ. ಶ್ರೀರಾಮಕೃಷ್ಣರು ಎಲ್ಲ ಧರ್ಮಗಳನ್ನೂ ಅವುಗಳ ಮೂಲಸ್ವರೂಪದಲ್ಲಿ ಅರಿತುಕೊಂಡು, ಅವುಗಳ ತಿರುಳಾದ ಆಧ್ಯಾತ್ಮಿಕ ಅನುಭವವನ್ನೂ ಆಯಾ ವಿಧಾನದಲ್ಲಿ ಮಾಡಿಕೊಂಡು, 'ಎಷ್ಟು ಮತಗಳೋ, ಅಷ್ಟು ಪಥಗಳು; ಪ್ರತಿಯೊಂದೂ ಸತ್ಯ' ಎಂದು ಸಾರಿದರು. ಧಾರ್ಮಿಕ ಮತಾಂಧತೆಯ ಅಪಾಯವನ್ನು ಕುರಿತು ಎಚ್ಚರಿಸುವ ಕೆಲಸವನ್ನೂ ಅವರು ಮಾಡಿದರು. 'ನನ್ನ ಧರ್ಮವೇ ಸತ್ಯ ಎನ್ನುವುದು ಅಜ್ಞಾನ. ಒಂದು ಧರ್ಮವನ್ನು ಅನುಸರಿಸು; ಆದರೆ ಇತರ ಧರ್ಮವನ್ನು ದೂರ ಬೇಡ' ಎಂದರು ಅವರು. ಸ್ವಾಮಿ ವಿವೇಕಾನಂದರ ವೈಜ್ಞಾನಿಕ ದೃಷ್ಟಿ ಹಾಗೂ ಶ್ರೀರಾಮಕೃಷ್ಣರ ಧರ್ಮಸಾಮರಸ್ಯದ ದೃಷ್ಟಿ – ಇವುಗಳೇ ನಿಜವಾದ ಧರ್ಮವನ್ನು ಅರಸುವವರಿಗೆ ದಾರಿದೀಪವಾಗಿವೆ. ✷

## ಸ್ವಾಮಿ ವಿವೇಕಾನಂದರ ಗುರುಶಕ್ತಿ



ಸ್ವಾಮೀಜಿ ತಮ್ಮ ಒಬ್ಬ ಶಿಷ್ಯನಿಗೆ ಹೇಳಿದರು, ''ಯಾರ ದೇಹ, ಮನಸ್ಸು ಪವಿತ್ರವಾಗಿದೆಯೋ, ಯಾರಲ್ಲಿ ನಿತ್ಯ-ಅನಿತ್ಯ ವಸ್ತು ವಿವೇಕ ಜ್ಞಾನವಿದೆಯೋ, ಊರ್ಜಿತ ಭಕ್ತಿ ಇದೆಯೋ, ಯಾರು ಧ್ಯಾನಶೀಲನಾಗಿದ್ದಾನೆಯೋ ಅವನಿಗೆ ಮಾತ್ರ ಭಗವತ್ಕೃಪೆಯಾಗುತ್ತದೆ.''

ಸ್ವಾಮೀಜಿ ಸದ್ಗುರುವಾಗಿದ್ದರು, ಸಿದ್ಧಗುರುವಾಗಿದ್ದರು. ಸ್ವಾಮೀಜಿಯವರ ಗುರುಭಾವ ದರ್ಶನೀಯವಾಗಿತ್ತು. ಒಂದು ದಿನ ಅವರು ಸ್ವಾಮಿ ಸ್ವರೂಪಾನಂದರಿಗೆ ಹೇಳಿದರು, ''ನೋಡು, ಸ್ವರೂಪ್, ನಾನು ಯಾರ ತಲೆಯ ಮೇಲೆ ಕೈ ಇಟ್ಟಿದ್ದೇನೊ, ಅವರು ಚಿಂತಿಸಬೇಕಾಗಿಲ್ಲ.'' ಇನ್ನೊಮ್ಮೆ ಸ್ವಾಮೀಜಿ, ''ನನ್ನ ಶಿಷ್ಯರು ಸಾವಿರ ಸಲ ನರಕಕ್ಕೆ ಹೋದರೆ, ನಾನು ಅವರನ್ನು ಸಾವಿರ ಸಲ ನರಕದಿಂದ ಮೇಲೆತ್ತುತ್ತೇನೆ. ಇದು ಸತ್ಯವಲ್ಲದಿದ್ದರೆ ಶ್ರೀರಾಮಕೃಷ್ಣರೂ ಸತ್ಯವಲ್ಲ'' ಎಂದಿದ್ದರು.

ಸ್ವಾಮೀಜಿಯವರ ಗುರುಶಕ್ತಿಯನ್ನು ಕಂಡು ಅವರ ಶಿಷ್ಯರು ಬೆರಗಾಗಿದ್ದರು.ಅವರ ದೈವೀ ಶಕ್ತಿ ಅವರ ಶಿಷ್ಯರಿಗೂ ಹರಿದು, ಅವರನ್ನು ಮಹಾತ್ಮರನ್ನಾಗಿಸಿತು. ಸ್ವಾಮೀಜಿಯವರ ಶಕ್ತಿ ಅವರ ಶಿಷ್ಯರಿಗಷ್ಟೇ ಸೀಮಿತವಾಯಿತೆ? ಇಲ್ಲ, ಅದು ಸಾಧ್ಯವಿಲ್ಲ. ಸ್ವಾಮೀಜಿಯವರದು ದೇಶಕಾಲಾತೀತ ವ್ಯಕ್ತಿತ್ವ. ಆದ್ದರಿಂದ ವಿಶ್ವದಾದ್ಯಂತ ಎಲ್ಲೆಡೆ, ಎಲ್ಲರೂ ಅವರ ವಿಚಾರ, ಚಿಂತನೆ-ಬೋಧನೆಗಳಿಂದ ಪ್ರಭಾವಿತರಾಗಿ ತಮ್ಮ ಜೀವನವನ್ನು ರೂಪಿಸಿಕೊಂಡಿದ್ದಾರೆ; ರೂಪಿಸಿಕೊಳ್ಳುತ್ತಿದ್ದಾರೆ. *'ನೌಮಿ ಗುರು ವಿವೇಕಾನಂದಂ...'*

*(ಮೂಲ: ಸ್ವಾಮಿ ಚೇತನಾನಂದರ ಇಂಗ್ಲಿಷ್ ಲೇಖನ, '**Naumi Guru Vivekanandam**', ವೇದಾಂತ ಕೇಸರಿ, ಡಿಸೆಂಬರ್ ೨೦೧೪; ಸಂಗ್ರಹ-ಅನುವಾದ: ಮಾತಾ ತ್ಯಾಗಮಯೀ)*

# ಗುರುಕೃಪೆ

ಸ್ವಾಮಿ ಕರುಣಾಕರಾನಂದ



ನಮ್ಮ ಪರಂಪರೆಯಲ್ಲಿ ಗುರುವಿಗಿರುವ ಸ್ಥಾನ ತುಂಬ ದೊಡ್ಡದು. ಯಾವುದೇ ಮಹತ್ತರ ಸಾಧನೆಗೆ ಗುರುಕೃಪೆ ಅನಿವಾರ್ಯ. ಕೆಲವು ಪ್ರಸಿದ್ಧ ಕಥಾನಕಗಳ ಹಿನ್ನೆಲೆಯಲ್ಲಿ ಈ ವಿಷಯವನ್ನು ನಿರೂಪಿಸಿರುವ ಸ್ವಾಮೀಜಿಯವರು ಸಂಸ್ಕೃತ, ದರ್ಶನ ಮತ್ತು ವೇದಾಂತ ವಿಷಯಗಳಲ್ಲಿ ಆಳವಾದ ಅಧ್ಯಯನ ಮಾಡಿದ್ದಾರೆ. ಈಗ ಅವರು ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಆಹ್! ಈ ಹೆಸರು ಸಾಧಕನ ಮನಸ್ಸಿನಲ್ಲಿ ಒಮ್ಮೆಲೆ ತಂದೆಯಲ್ಲಿನ ರಕ್ಷಣೆ, ತಾಯಿಯಲ್ಲಿನ ಪ್ರೀತಿ, ಚೈತನ್ಯಸ್ವರೂಪಿಯಾದ ಭಗವಂತನನ್ನು ನೆನಪಿಗೆ ತಂದುಕೊಡುತ್ತದೆ! ಶಂಕರರಂತೂ ಸದ್ಗುರುವಿನ ವರ್ಣನೆ ಮಾಡುವಾಗ ತಮ್ಮ ***ಶತಶ್ಲೋಕೀ*** ಎಂಬ ಗ್ರಂಥದಲ್ಲಿ ಹೀಗೆ ಉದ್ಗರಿಸಿದ್ದಾರೆ: ''**ದೃಷ್ಟಾಂತೋ ನೈವ ದೃಷ್ಟಃ ತ್ರಿಭುವನಜಠರೇ ಸದ್ಗುರೋರ್ಜ್ಞಾನದಾತುಃ ಸ್ಪರ್ಶಃ ಚೇತ್ ತತ್ರ ಕಲ್ಪ್ಯಃ ಸ ನಯತಿ ಯದಹೋ ಸ್ವರ್ಣತಾಮಶ್ಮಸಾರಮ್ । ನ ಸ್ಪರ್ಶತ್ವಂ ತಥಾಪಿ ಶ್ರಿತಚರಣಯುಗೇ ಸದ್ಗುರುಃ ಸ್ವೀಯಶಿಷ್ಯೇ ಸ್ವೀಯಂ ಸಾಮ್ಯಂ ವಿಧತ್ತೇ ಭವತಿ ನಿರುಪಮಸ್ತೇನ ವಾ ಲೌಕಿಕೋಽಪಿ॥**'' – 'ಜ್ಞಾನವನ್ನು ನೀಡುವ ಸದ್ಗುರುವಿನ ವಿಷಯದಲ್ಲಿ ಕೊಡಲು ಮೂರೂ ಲೋಕಗಳಲ್ಲಿ ಯಾವ ದೃಷ್ಟಾಂತವೂ ಸಿಗುವುದಿಲ್ಲ. ಯಾವುದೇ ಲೋಹವನ್ನು ಚಿನ್ನವನ್ನಾಗಿಸುವ ಸ್ಪರ್ಶಮಣಿಯನ್ನು ದೃಷ್ಟಾಂತವಾಗಿ ಕೊಡೋಣವೆಂದರೆ, ಆ ಸ್ಪರ್ಶಮಣಿಯೂ ಯಾವ ಲೋಹವನ್ನು ತನ್ನಂತೆಯೆ ಇನ್ನೊಂದು ಸ್ಪರ್ಶಮಣಿಯನ್ನಾಗಿಸದು. ಆದರೆ, ಗುರುವು ತನ್ನ ಪಾದಗಳಲ್ಲಿ ಶರಣಾಗತನಾದ ತನ್ನ ಶಿಷ್ಯನನ್ನು ತನ್ನಂತೆಯೇ ಇನ್ನೊಬ್ಬ ಸದ್ಗುರುವನ್ನಾಗಿಯೇ ಮಾಡಿಬಿಡುತ್ತಾನಾದ್ದರಿಂದ ಆತನನ್ನು ಯಾವುದಕ್ಕೂ ಹೋಲಿಸಲಾಗದು ಹಾಗೂ ಅದರಿಂದ ಆತನು ಅಲೌಕಿಕನೂ ಆಗಿಬಿಡುವನು!' ಬ್ರಹ್ಮಾತ್ಮೈಕ್ಯದ ಸ್ವರೂಪ ಜ್ಞಾನವನ್ನು ಬೋಧಿಸಿ ಯೋಗ್ಯ ಸಾಧಕನಿಗೆ ಅನೇಕ ಜನ್ಮಗಳ ಭ್ರಾಂತಿಯಿಂದ ಬಿಡುಗಡೆ ಮಾಡಿಸಿದಾಗ ಆ ಶಿಷ್ಯನಿಗೆ ಆಗುವ ಆನಂದ, ಕೃತಾರ್ಥತೆ, ಕೃತಜ್ಞತೆ ಹಾಗೂ ಅವುಗಳನ್ನು ಆತ ವ್ಯಕ್ತಪಡಿಸುವ ರೀತಿಯನ್ನು ***ಪ್ರಶ್ನೋಪನಿಷತ್ತಿನ*** ಕೊನೆಯ ಮಂತ್ರದಲ್ಲಿ ಸುಂದರವಾಗಿ ಚಿತ್ರಿಸಲಾಗಿದೆ. ಸುಕೇಶಾದಿ ಶಿಷ್ಯರು ಗುರು ಪಿಪ್ಪಲಾದನಿಂದ ಸಮ್ಯಗ್ ಜ್ಞಾನವನ್ನು ಪಡೆದು ಅವರನ್ನು ಪೂಜಿಸಿ ಹೇಳುತ್ತಾರೆ, ''**ತ್ವಂ ಹಿ ನಃ ಪಿತಾ ಯೋಽಸ್ಮಾಕಮವಿದ್ಯಾಯಾ ಪರಂ ಪಾರಂ ತಾರಯಸೀತಿ**'' – ''ನೀವು ನಮ್ಮ ತಂದೆ. ಏಕೆಂದರೆ ನೀವು ನಮ್ಮನ್ನು ದಡವೇ ಇಲ್ಲದ ಮಹಾ ಅವಿದ್ಯೆಯೆಂಬ ಸಾಗರದಿಂದ ಮತ್ತೆ ಹಿಂತಿರುಗಿ ಬರದ ಬ್ರಹ್ಮಪದಕ್ಕೆ ದಾಟಿಸಿರುವಿರಿ.'' ಉಪನಿಷತ್ತುಗಳಲ್ಲಿ ಗುರುವಿನ ಮಾರ್ಗದರ್ಶನವಿಲ್ಲದೆ ಆತ್ಮಜ್ಞಾನ ಸಿದ್ಧಿಸದು ಎಂಬುದಾಗಿಯೇ ಹೇಳಲಾಗಿದೆ: ''**ಅನನ್ಯಪ್ರೋಕ್ತೇ ಗತಿರತ್ರ ನಾಸ್ತಿ**'' *(ಕಠ., ೧.೨.೮)* 'ಆತ್ಮಜ್ಞಾನಿಯಾದ ಗುರುವಲ್ಲದೆ ಬೇರಾರಿಂದಲೂ ಆತ್ಮನನ್ನು ತಿಳಿಸಿಕೊಡಲಾಗುವುದಿಲ್ಲ'; ''**ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್...**'' *(ಮುಂಡಕ., ೧.೨.೧೨)* 'ಆತ್ಮತತ್ತ್ವವನ್ನು ಅರಿತುಕೊಳ್ಳಲು ಆ ಜಿಜ್ಞಾಸುವು ಗುರುವನ್ನೇ ಬಳಿಸಾರಬೇಕು.'

ಗುರುವು ಬೇರೆಯಲ್ಲ, ಅವರ ಕೃಪೆ ಬೇರೆಯಲ್ಲ. ಅವರು ಕೃಪಾಸ್ವರೂಪರೆ. ಗುರುವಿನ ಕೃಪೆಯೂ ಒಮ್ಮೆ ಕಾಠಿನ್ಯವನ್ನು ತೋರುತ್ತ, ಇನ್ನೊಮ್ಮೆ ಪ್ರೀತಿಯ ಪ್ರವಾಹವನ್ನೇ ಹರಿಸುತ್ತ, ಶಿಷ್ಯನ ಜೀವನದಲ್ಲಿ ಆಧ್ಯಾತ್ಮಿಕ ಬೆಳಕನ್ನು ನೀಡುತ್ತ ಅನೇಕ ಬಗೆಯಾಗಿ ಪ್ರಕಟವಾಗುತ್ತದೆ. ಆ ಕೃಪೆಯನ್ನು ಅರ್ಥಮಾಡಿಕೊಂಡು, ತನ್ನದಾಗಿಸಿಕೊಳ್ಳಬೇಕಾದರೆ ಶಿಷ್ಯನು ತಾನು ಸಂಪೂರ್ಣವಾಗಿ ಗುರುವಿಗೆ ಶರಣಾಗಬೇಕಾಗುತ್ತದೆ. ಆ ಶರಣಾಗತಿಯೆನ್ನುವುದೂ ಒಂದು ದೊಡ್ಡ ಸಾಧನೆ. ಗುರುವಿನ ಸತ್ಸಂಗದಲ್ಲಿದ್ದು ಅವರ ಶುಶ್ರೂಷೆಯನ್ನು ನಿಷ್ಠೆಯಿಂದ, ನಿರಹಂಭಾವನೆಯಿಂದ ಮಾಡಿಕೊಂಡಿದ್ದರೆ ಶಿಷ್ಯನ ಆಧ್ಯಾತ್ಮಿಕ ಜಾಗೃತಿ ಶೀಘ್ರವಾಗುವುದು ನಮಗೆ ಇತಿಹಾಸದಲ್ಲಿ ಕಂಡುಬರುತ್ತದೆ. ಮಹಾಭಾರತದಲ್ಲಿ (ಆದಿಪರ್ವದ ಪೌಷ್ಯಪರ್ವ) ಆರುಣಿಯೆಂಬ ಶಿಷ್ಯ ಆಯೋದ ಧೌಮ್ಯರ ಶುಶ್ರೂಷೆಯನ್ನು ಮಾಡಿದ ವಿವರ ಸಿಗುತ್ತದೆ. ಒಂದು ದಿನ ಪಾಂಚಾಲದ ಆರುಣಿಗೆ ಗದ್ದೆಗೆ ಹೋಗಿ, ಒಡೆದು ಹೋದ ಕಟ್ಟೆಯನ್ನು ಕಟ್ಟಿ, ನೀರು ಗದ್ದೆಯಲ್ಲಿಯೇ ನಿಲ್ಲುವಂತೆ ಮಾಡಲು ಗುರುಗಳು ಆಜ್ಞೆಯಿತ್ತರು. ಗುರುವಿನಾಜ್ಞೆಯಂತೆ ಗದ್ದೆಗೆ ಬಂದು, ಒಡೆದ ಕಟ್ಟೆಯನ್ನು ಕಟ್ಟಿ, ನೀರು ನಿಲ್ಲಿಸಲು ಪ್ರಯತ್ನಿಸಿದ ಆರುಣಿ. ಏನೂ ಮಾಡಿದರೂ ನೀರು ನಿಲ್ಲುತ್ತಿಲ್ಲ. ಕೊನೆಗೆ ಒಡೆದ ಜಾಗದಲ್ಲಿ ತಾನೇ ಅದರ ತಡೆಗೋಡೆಯಾಗಿ ಮಲಗಿಬಿಟ್ಟ! ಈ ಕಡೆ,

ತನ್ನ ಪ್ರಿಯ ಶಿಷ್ಯನು ಎಷ್ಟು ಹೊತ್ತಾದರೂ ಬರದೆ ಇರುವುದನ್ನು ಗಮನಿಸಿದ ಧೌಮ್ಯರು ಇತರ ಶಿಷ್ಯರೊಂದಿಗೆ ಅಲ್ಲಿಗೆ ಬಂದು ಕೂಗಿದಾಗ, ತನ್ನ ಮೈಮೇಲಿದ್ದ ಕೆಸರನ್ನು ಕೊಡವಿ ಮೇಲೆದ್ದ ಶಿಷ್ಯನನ್ನು ನೋಡಿದರು. ಆತನ ಗುರುಭಕ್ತಿಯನ್ನು ಅನುಮೋದಿಸಿ 'ಆರುಣಿ, ನೀನು ಕಟ್ಟೆಯನ್ನು ಒಡೆದು ಮೇಲೆದ್ದದ್ದರಿಂದ ನೀನು ಉದ್ದಾಲಕನೆಂದು ಹೆಸರು ಪಡೆಯುವೆ. ನೀನು ನನ್ನ ಆಜ್ಞೆಯನ್ನು ಪಾಲಿಸಿದ್ದರಿಂದ ನಿನಗೆ ಕಲ್ಯಾಣವಾಗಲಿ. ಎಲ್ಲ ವೇದ ಹಾಗೂ ಧರ್ಮಶಾಸ್ತ್ರಗಳ ರಹಸ್ಯಗಳು ನಿನ್ನ ಬುದ್ಧಿಯಲ್ಲಿ ತನ್ನಿಂತಾನೇ ಸ್ಫುರಿಸಲಿ' ಎಂದು ಆಶೀರ್ವದಿಸಿದರು.

ಅದೇ ರೀತಿಯಲ್ಲಿ ಉಪಮನ್ಯು ಎಂಬ ಇನ್ನೊಬ್ಬ ಶಿಷ್ಯನೂ ಗುರುಶುಶ್ರೂಷೆಯಿಂದ ಜ್ಞಾನವನ್ನು ಪಡೆದುಕೊಂಡನು. ಧೌಮ್ಯರು ಅವನಿಗೆ ಆಶ್ರಮದ ಹಸುಗಳನ್ನು ಪ್ರತಿದಿನವೂ ಮೇಯಿಸಿಕೊಂಡು ಬರಲು ಆಜ್ಞೆಯಿತ್ತರು. ಪ್ರತಿದಿನವೂ ಬೆಳಿಗ್ಗೆ ಹಸುಗಳನ್ನು ಹೊಡೆದುಕೊಂಡು ಹೋಗಿ ಸಾಯಂಕಾಲ ಗುರುವಿನ ಮನೆಗೆ ಬಂದು ನಿಂತುಕೊಂಡು ಅವರನ್ನು ನಮಸ್ಕರಿಸುತ್ತಿದ್ದ. ಗುರು ನೋಡುತ್ತಿದ್ದರು, ಶಿಷ್ಯನು ದಷ್ಟ-ಪುಷ್ಟವಾಗಿ ಬೆಳೆಯುತ್ತಿದ್ದ. ಅವರು ಅವನನ್ನು ಕೇಳಿದರು, ''ಮಗು, ನೀನು ಹೇಗೆ ಜೀವನ ನಡೆಸುತ್ತಿದ್ದಿಯೆ? ದಷ್ಟ-ಪುಷ್ಟವಾಗಿರುವೆ?'' ''ನಾನು ಭಿಕ್ಷೆ ಬೇಡಿ ಬಂದದ್ದರಿಂದ ಜೀವನ ನಡೆಸುತ್ತಿದ್ದೇನೆ, ಗುರುಗಳೆ'' ಎಂದನು ಉಪಮನ್ಯು. ''ನನಗೆ ಮೊದಲು ಅದನ್ನು ಅರ್ಪಿಸದೆ ನೀನು ಭಿಕ್ಷೆಯನ್ನು ಉಪಯೋಗಿಸಬಾರದಪ್ಪ, ಮಗು'' ಎಂದರು ಧೌಮ್ಯರು. ''ಹಾಗೆಯೇ ಆಗಲಿ ಗುರುಗಳೆ'' ಎಂದು ಉಪಮನ್ಯುವು ಪ್ರತಿದಿನವೂ ಭಿಕ್ಷೆ ಬೇಡಿ ಗುರುಗಳ ಮುಂದಿಡುತ್ತಿದ್ದ. ಗುರುಗಳು ಅವನು ತಂದ ಎಲ್ಲ ಭಿಕ್ಷೆಯನ್ನು ತಾವೇ ಸ್ವೀಕರಿಸಿಬಿಡುತ್ತಿದ್ದರು. ಅವನಿಗೇನೂ ಉಳಿಸುತ್ತಿರಲಿಲ್ಲ. ಉಪಮನ್ಯುವು ಪುನಃ ಹಿಂದಿನಂತೆ ಹಸುಗಳ ರಕ್ಷಣೆಯಲ್ಲಿ ನಿರತನಾದ. ಸ್ವಲ್ಪ ದಿವಸಗಳ ನಂತರ ತನ್ನ ಮುಂದೆ ನಿಂತು ನಮಸ್ಕರಿಸುತ್ತಿರುವ ಶಿಷ್ಯನು ಹಾಗೆಯೇ ದಷ್ಟ-ಪುಷ್ಟವಾಗಿರುವುದನ್ನು ನೋಡಿದ ಗುರುಗಳು ಹಿಂದಿನಂತೆಯೆ ಅವನನ್ನು ಪ್ರಶ್ನಿಸಿದರು. ''ಗುರುಗಳೆ, ನಿಮಗೆ ನಾನು ಭಿಕ್ಷೆ ಬೇಡಿದ್ದನ್ನು ಕೊಟ್ಟು ಮತ್ತೆ ಭಿಕ್ಷೆ ಬೇಡಿ ತಿನ್ನುತ್ತಿದ್ದೆ'' ಎಂದು ಉತ್ತರಿಸಿದನು ಉಪಮನ್ಯು. ಗುರುಗಳು, ''ನೀನು ಹಾಗೆ ಎರಡೆರಡು ಬಾರಿ ಭಿಕ್ಷೆ ಬೇಡಿದರೆ, ಭಿಕ್ಷೆಯಿಂದ ಜೀವನ ನಡೆಸುವ ಬೇರೆಯವರಿಗೆ ಭಿಕ್ಷೆ ಸಿಗದಂತಾಗುತ್ತದೆ. ಹಾಗೆ ಮಾಡಬೇಡ'' ಎಂದರು. ಉಪಮನ್ಯುವು, ಹಾಗೆಯೇ ಆಗಲೆಂದು ಪುನಃ ಹೊರಟು ಹೋದನು. ಮತ್ತೆ ಕೆಲವು ಕಳೆದ ಮೇಲೆ ಗುರುವು ಅವನನ್ನು ನೋಡಲು, ಅವನ ದೇಹ ಎಂದಿನಂತೆಯೆ ಇದ್ದದ್ದನ್ನು ಕಂಡು ಮರುಪ್ರಶ್ನೆ ಮಾಡಲು, ತಾನು ಹಸುಗಳ ಹಾಲು ಕುಡಿದು ಜೀವನ ನಿರ್ವಾಹ ಮಾಡುತ್ತಿದ್ದೇನೆ ಎಂದನು. ತಾನು ಹಾಗೆ ಆಜ್ಞೆ ನೀಡದ್ದರಿಂದ ಉಪಮನ್ಯುವು ಹಾಗೆ ಮಾಡಬಾರದೆಂದಾಗ ಉಪಮನ್ಯುವು ಹಾಗೆಯೇ ಆಗಲೆಂದು ಹೇಳಿ ಪುನಃ ಹಸುಗಳ ರಕ್ಷಣೆಯಲ್ಲಿ ನಿರತನಾದನು. ಇನ್ನೂ ಸ್ವಲ್ಪ ದಿನ ಬಿಟ್ಟು ನೋಡಲು ಶಿಷ್ಯನ ಆರೋಗ್ಯವು ಹಾಗೆಯೇ ಇತ್ತು. ಆಶ್ಚರ್ಯದಿಂದ ಗುರು ಪ್ರಶ್ನಿಸಲು, ''ಇದೀಗ ತಾನು ಕರುಗಳ ಬಾಯಿಯಲ್ಲಿ ಇದ್ದ ಹಾಲಿನ ನೊರೆಯನ್ನು ಸೇವಿಸಿಯೇ ಜೀವಿಸುತ್ತಿದ್ದೇನೆ'' ಎಂದು ಶಿಷ್ಯ ಉತ್ತರಿಸಿದನು. ''ನೋಡು ಈ ಕರುಗಳು ಉತ್ತಮ ಸ್ವಭಾವದವುಗಳು. ಆದ್ದರಿಂದ ನಿನ್ನ ಮೇಲೆ ದಯೆಯಿಂದ ಹೆಚ್ಚು ನೊರೆಯನ್ನು ತಾವು ಕುಡಿಯದೆ ಹೊರಹಾಕಿ ಬಿಡುತ್ತವೆ. ನೀನು ಆ ನೊರೆಯನ್ನು ಸೇವಿಸಿ ಅವುಗಳ ಆಹಾರವನ್ನು ಕಿತ್ತುಕೊಳ್ಳುತ್ತಿರುವೆ'' ಎಂದರು ಗುರುಗಳು. ''ಗುರುಗಳೆ, ಇನ್ನು ಮುಂದೆ ಅದನ್ನೂ ಸೇವಿಸುವುದಿಲ್ಲ'' ಎಂದು ಉಪಮನ್ಯುವು ಹೊರಟು ಹೋದನು. ಇದೀಗ ಎಲ್ಲ ಬಗೆಯ ಆಹಾರದಿಂದ ವಂಚಿತನಾದ ಉಪಮನ್ಯುವು ಕಾಡಿನಲ್ಲಿ ಅಲ್ಲಿ-ಇಲ್ಲಿ ಬಿದ್ದ ಎಲೆಗಳನ್ನು ತಿಂದೇ ಜೀವನ ನಡೆಸಲು ಆರಂಭಿಸಿ ದನು. ಒಮ್ಮೆ ಹೀಗೆ ಬಹಳ ಹಸಿವೆಯಿಂದ ಗೊತ್ತಿಲ್ಲದೆ, ಎಕ್ಕದ ಎಲೆಗಳನ್ನು ತಿಂದನು. ಅದರಿಂದ ಕಣ್ಣುಗಳನ್ನು ಕಳೆದುಕೊಂಡನು. ಅಲ್ಲಲ್ಲಿ ದಿಕ್ಕುಗಾಣದೆ ಅಲೆಯುತ್ತಿದ್ದಾಗ ಹಾಳು ಬಾವಿಯೊಂದರಲ್ಲಿ ಬಿದ್ದುಬಿಟ್ಟನು. ಪ್ರತಿದಿನವೂ ತನ್ನ ಬಳಿಗೆ ಬಂದು ನಮಸ್ಕಾರ ಸಲ್ಲಿಸುತ್ತಿದ್ದ ತನ್ನ ಪ್ರಿಯ ಶಿಷ್ಯನು ಸ್ವಲ್ಪ ದಿನಗಳಿಂದ ಏಕೆ ಬರುತ್ತಿಲ್ಲವೆಂದು ಆಲೋಚಿಸಿದ ಗುರುಗಳು 'ನಾನವನ ಆಹಾರವನ್ನೆಲ್ಲ ಕಿತ್ತುಕೊಂಡೆ ನೆಂದು ಭಾವಿಸಿ ನನ್ನ ಮೇಲೆ ಕುಪಿತನಾಗಿರಬೇಕು. ನಾನು ಅವನನ್ನು ಕಂಡು ಸಮಾಧಾನ ಹೇಳಬೇಕು' ಎಂದು ಭಾವಿಸಿದ ಗುರುಗಳು ತಮ್ಮ ಇತರ ಶಿಷ್ಯರೊಂದಿಗೆ ಕಾಡಿನಲ್ಲಿ ಈತನ ಹೆಸರು ಹೇಳುತ್ತ ಕರೆದರು. ಎಲ್ಲೋ ಬಾವಿಯಿಂದ ಒಂದು ಶಬ್ದ ಕೇಳಿಬಂತು. ''ಗುರುಗಳೆ, ಕ್ಷಮಿಸಿ. ಕಣ್ಣು ಕಳೆದುಕೊಂಡು ಈ ಪಾಳು ಬಾವಿಯಲ್ಲಿ ಬಿದ್ದಿದ್ದೇನೆ.'' ಎಲ್ಲರೂ ಆ ಬಾವಿಯ ಬಳಿಗೆ ಬಂದಾಗ ಶಿಷ್ಯನು ನಡೆದದ್ದನ್ನೆಲ್ಲ ತಿಳಿಸಿದನು. ಕರುಣೆಯಿಂದ ಗುರುಗಳು, ''ಮಗು, ಅಶ್ವಿನೀಕುಮಾರರು ದೇವತೆಗಳ ವೈದ್ಯರು. ಅವರನ್ನು ಸ್ಮರಿಸು. ಅವರು ನಿನ್ನ ಕಣ್ಣುಗಳನ್ನು ಸರಿಪಡಿಸುವರು' ಎಂದರು. ಉಪಮನ್ಯುವು ಅವಳಿ ದೇವತೆಗಳ ಸ್ತುತಿ ಮಾಡಿದಾಗ ಅವರು ಪ್ರತ್ಯಕ್ಷರಾಗಿ ಒಂದು ಸಿಹಿಯಾದ ಅಪ್ಪವನ್ನು ತಿನ್ನಲು ಕೊಟ್ಟು, ''ಇದನ್ನು ಸೇವಿಸಿದರೆ ನಿನಗೆ ಕಣ್ಣುಗಳು ಹಿಂತಿರುಗುವುವು'' ಎಂದರು. ''ಗುರುಗಳಿಗೆ ಮೊದಲು ನಿವೇದಿಸದೆ ನಾನು ಏನನ್ನೂ ತಿನ್ನುವುದಿಲ್ಲ'' ಎಂದ ಉಪಮನ್ಯು. ''ಈ ಹಿಂದೆ ನಿನ್ನ ಗುರುವೂ ನಮ್ಮನ್ನು ಸ್ತುತಿಸಿ ಈ ರೀತಿಯ ಸಿಹಿಯಾದ ಅಪ್ಪವನ್ನು ಪಡೆದು ಕೊಂಡನು. ಆದರೆ, ತನ್ನ ಗುರುವಿಗೆ ಮೊದಲು ಕೊಡದೆ ತಾನೇ ತಿಂದನು. ನೀನೂ ನಿನ್ನ ಗುರುವಿನಂತೆ ಮಾಡು'' ಎಂದರು. ಆದರೂ ತಾನು ಗುರುವಿಗೆ ಮೊದಲು ನೀಡದೆ ತಿನ್ನಲಾರೆ ಎಂದು ಉಪಮನ್ಯುವು ಪಟ್ಟು ಹಿಡಿದನು. ಅವನ ಗುರುಭಕ್ತಿಯನ್ನು ಕಂಡು ಪ್ರಸನ್ನರಾದ ಅಶ್ವಿನೀಕುಮಾರರು ಅವನಿಗೆ ಕಣ್ಣುಗಳನ್ನು ನೀಡಿದರು. ಆಯೋದಧೌಮ್ಯರೂ, ''ಮಗು, ನೀನು ಸಕಲ ವೇದ, ಧರ್ಮಶಾಸ್ತ್ರಗಳಲ್ಲಿ ಪಾರಂಗತನಾಗುವೆ'' ಎಂದು ಆಶೀರ್ವದಿಸಿದರು.

ಆಚಾರ್ಯ ಶಂಕರರು ತಮ್ಮ ಶಿಷ್ಯ ಗಿರಿಯ ಮೇಲೆ ಅನುಗ್ರಹ ಮಾಡಿದ ಬಗೆಯೂ ರೋಚಕವಾಗಿದೆ. ಶೃಂಗೇರಿಗೆ ಆಚಾರ್ಯರು ಬಂದಿದ್ದಾಗ ಈ ಶಿಷ್ಯ ಅವರನ್ನು ಆಶ್ರಯಿಸಿದನು. ಮಿತಭಾಷಿ, ಕಾರ್ಯದಲ್ಲಿ ದಕ್ಷತೆ, ಗುರುವಿನ ಆಣತಿಯೇ ತನ್ನ ಜೀವನವೆಂದು ಬಗೆದು ಗುರುಗಳ ಮನಸ್ಸಿನಲ್ಲಿದ್ದುದನ್ನು ಬಾಯಿಯಿಂದ ಹೊರ ಬರುವ ಮೊದಲೇ ಮಾಡುತ್ತಿದ್ದ ಗಿರಿಯ ಮೇಲೆ ಶಂಕರರಿಗೆ ವಿಶೇಷ ಮಮತೆಯಿತ್ತು. ಗುರುವಿನ ಸೇವೆಯೇ ಜೀವನವ್ರತವಾಗಿಟ್ಟು ಕೊಂಡಿದ್ದ ಗಿರಿಯು ಒಮ್ಮೆ ಗುರುಗಳ ಬಟ್ಟೆ ಒಗೆಯುತ್ತ ಪ್ರವಚನಕ್ಕೆ ಬರಲು ತಡವಾಯಿತು. ಎಲ್ಲರೂ ಗಿರಿಯ ಬರವಿಗಾಗಿ ಕಾಯುತ್ತಿದ್ದಾಗ ತಡವಾಗುತ್ತಿದ್ದುದನ್ನು ಗಮನಿಸಿದ ಪದ್ಮಪಾದರು, ತಮ್ಮ ಕಣ್ಣಿನಿಂದಗೋಡೆಯನ್ನು ಸೂಚಿಸುತ್ತ, ''ನಾವು ಕಾಯುತ್ತಿರುವುದಾದರೂ ಯಾರಿಗೆ? ಈ ಗೋಡೆಯಂತಹ ಬುದ್ಧಿಯಿರುವ ಆ ಪೆದ್ದ, ಶಾಸ್ತ್ರಾಧ್ಯಯನಕ್ಕೆ ಅಧಿಕಾರಿಯೇ ಅಲ್ಲ !'' ಎಂದರು. ಈ ಶಿಷ್ಯನ ಹಾಗೂ ಇನ್ನಿತರರ ವ್ಯಂಗ್ಯವನ್ನು ನೋಡಿ, ಗಿರಿಯ ಗುರುಭಕ್ತಿಗೆ ಮೆಚ್ಚಿ ಆತನ ಮೇಲೆ ಅನುಗ್ರಹ ಮಾಡಲು ಶಂಕರರು ತಮ್ಮ ಸಂಕಲ್ಪದಿಂದಷ್ಟೆ ಆತನಲ್ಲಿ ಹದಿನಾಲ್ಕು ವಿದ್ಯೆಗಳೂ ಸ್ಫುರಿಸುವಂತೆ ಹರಸಿದರು. ಅಷ್ಟರಲ್ಲಿಯೆ ಗಿರಿಯು ತೋಟಕವೆಂಬ ವೃತ್ತದಲ್ಲಿ ಸುಂದರವಾದ ಗುರುಸ್ತುತಿ ಮಾಡುತ್ತ ಅಲ್ಲಿಗೆ ಬಂದನು! ಆ ವೃತ್ತದಲ್ಲಿ ಪದ್ಯರಚನೆ ಮಾಡಿ ಗುರುಗಳನ್ನು ಸಂತೋಷಪಡಿಸಿದ ಗಿರಿಯನ್ನು 'ತೋಟಕಾಚಾರ್ಯ'ನೆಂಬ ಹೆಸರಿನಿಂದಲೇ ವಿದ್ವತ್ ಸಮಾಜವು ಸಂಬೋಧಿಸಿತು.

ಗುರುಕೃಪೆ ಯಾವ ರೀತಿಯಲ್ಲಿ ಉಂಟಾಗುತ್ತದೆ ಎಂಬುದನ್ನು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಗಾಗ್‌ರೌನ್ ಎಂಬ ನಗರದಲ್ಲಿ ಪೀಪಾ ಎಂಬ ಹೆಸರಿನ ರಾಜನೊಬ್ಬನಿದ್ದ; ಅವನು ದೇವಿಯ ಆದೇಶದಂತೆ ಕಾಶಿಯಲ್ಲಿ ನೆಲೆಸಿದ್ದ ಸ್ವಾಮಿ ರಾಮಾನಂದರ ಆಶ್ರಮಕ್ಕೆ ಭೇಟಿಯಿತ್ತ, ಅಲ್ಲಿ ಹರಿಕೀರ್ತನೆಯಲ್ಲಿ ಪಾಲ್ಗೊಂಡ. ರಾಜನು ದ್ವಾರಪಾಲಕನ ಬಳಿಯಲ್ಲಿ ತಾನು ಸ್ವಾಮಿಗಳ ದರ್ಶನಾಕಾಂಕ್ಷಿಯಾಗಿ ಬಂದಿರುವೆನೆಂದು ತಿಳಿಸಿದ. ದ್ವಾರಪಾಲಕ ಹಿಂತಿರುಗಿ ಬಂದು, ಸ್ವಾಮಿಗಳು ತಮಗೆ ರಾಜನ ಬಳಿ ಯಾವುದೇ ಕೆಲಸವಿಲ್ಲವೆಂದು ತಿಳಿಸಿದ್ದಾರೆ ಎಂಬ ಸಂದೇಶವನ್ನು ನೀಡಿದ. ರಾಜನು ಈ ಸಂದೇಶದ ಮರ್ಮವನ್ನರಿತುಕೊಂಡು, ರಾಜವೈಭವಗಳು ಭಗವತ್‌ಪ್ರಾಪ್ತಿಗೆ ತಡೆಯೆಂಬುದಾಗಿ ಭಾವಿಸಿ ತನ್ನೆಲ್ಲ ಸಂಪತ್ತನ್ನು ಬಡಬಗ್ಗರಿಗೆ ಹಂಚಿ, ಉಟ್ಟ ಬಟ್ಟೆಯಲ್ಲಿ ಸ್ವಾಮಿಗಳ ಬಳಿಗೆ ಬಂದ. ಸ್ವಾಮಿಗಳು ಸೇವಕನ ಬಳಿಯಲ್ಲಿ, ''ಅವನಿಗೆ ಹೋಗಿ ಬಾವಿಯಲ್ಲಿ ಬೀಳುವಂತೆ ಹೇಳು'' ಎಂದುಬಿಟ್ಟರು! ಆ ಆದೇಶವನ್ನು ಕೇಳಿದ ರಾಜನು ಬಹಳ ಪ್ರಸನ್ನನಾಗಿ ಬಾವಿಯಲ್ಲಿ ಬೀಳಲು ಹೋದನು. ಆದರೆ ಸ್ವಾಮಿಗಳ ಸೇವಕರು ಆ ರೀತಿ ಮಾಡದಂತೆ ಅವನನ್ನು ತಡೆದು ನಿಲ್ಲಿಸಿದರು. ರಾಜನ ಇಂತಹ ಅಚಲ ನಿಷ್ಠೆಯನ್ನು ಕಂಡು ಬಹಳ ಸಂತುಷ್ಟರಾದ ರಾಮಾನಂದರು ಅವನನ್ನು ತಮ್ಮ ಶಿಷ್ಯನಾಗಿ ಸ್ವೀಕರಿಸಿದರು. ಅವರ ಸಂಪರ್ಕಕ್ಕೆ ಬಂದ ಪೀಪಾನಲ್ಲಿ ಹರಿಭಕ್ತಿಯು ಪ್ರಜ್ವಲಿಸತೊಡಗಿತು.

ಸಂತ ಏಕನಾಥರ ಗುರುಗಳು ಜನಾರ್ದನ ಪಂತರು, ದತ್ತಾತ್ರೇಯನ ಮಹಾಭಕ್ತರು. ಅವರ ಭಕ್ತಿಗೆ ಮೆಚ್ಚಿ ದತ್ತಾತ್ರೇಯನು ಮಾನವ ಶರೀರದಲ್ಲಿ ಅವರೊಡನೆ ಒಡನಾಟವಾಡುತ್ತಿದ್ದ! ಜನಾರ್ದನ ಪಂತರು ದೌಲತಾಬಾದ್ ಕೋಟೆಯ ಖಿಲ್ಲೇದಾರರಾಗಿದ್ದರು. ಮಹಿಪತಿಯ ***ಭಕ್ತಲೀಲಾಮೃತ*** ದಲ್ಲಿ ಏಕನಾಥರು ಹಾಗೂ ಅವರ ಗುರು ಜನಾರ್ದನ ಪಂತರ ಗುರು-ಶಿಷ್ಯ ಸಂಬಂಧವನ್ನು ವಿವರವಾಗಿಯೆ ಚಿತ್ರಿಸಲಾಗಿದೆ. ಪ್ರತಿ ಶುಕ್ರವಾರ ಅವರು ತಮ್ಮ ಪೂಜೆಯ ಕೋಣೆಯಿಂದ ಹೊರಬರುತ್ತಿರಲಿಲ್ಲ. ಶುಕ್ರವಾರಗಳಂದು ಯಾವ ಅಧಿಕಾರಿಗಳನ್ನೂ ಅವರು ಭೇಟಿ ಮಾಡಬೇಕಿಲ್ಲ ಎಂದು ರಾಜನೇ ಆಜ್ಞೆ ನೀಡಿದ್ದ. ಕೋಟೆಯ ಬಳಿಯಲ್ಲಿ ಗಹನವಾದ ಕಾಡಿನಿಂದ ಕೂಡಿದ ಬೆಟ್ಟವೊಂದಿತ್ತು. ಅದರ ಮೇಲೆ ಸಮತಲ ಪ್ರದೇಶವೊಂದರಲ್ಲಿ ಶುಭ್ರವಾದ ಸರೋವರವಿತ್ತು. ಜನಾರ್ದನರು ಪ್ರತಿ ಶುಕ್ರವಾರ ಆ ಬೆಟ್ಟವನ್ನೇರಿ, ಆ ಸರೋವರದಲ್ಲಿ ಮಿಂದು ತಮ್ಮ ಸಾಧನೆಯನ್ನು ಮಾಡುತ್ತಿದ್ದರು. ದತ್ತಾತ್ರೇಯನು ಆಗ ಅವರಿಗೆ ಅಲ್ಲಿ ಕಾಣಿಸಿಕೊಳ್ಳುತ್ತಿದ್ದನು. ಇಬ್ಬರೂ ಅಲ್ಲಿ ಬಹಳ ಹೊತ್ತು ಆನಂದದಿಂದ ಪರಮಾತ್ಮನ ಸಂಬಂಧವಾಗಿ ಮಾತುಕತೆಯಾಡುತ್ತಿದ್ದರು. ಇದೀಗ ತಾನು ಪಡೆದ ಈ ಭಾಗ್ಯವನ್ನು ಏಕನಾಥನಿಗೂ ನೀಡಬೇಕೆಂದು ಸಂಕಲ್ಪಿಸಿ, ಶುಕ್ರವಾರ ಅವನನ್ನೂ ತಮ್ಮ ಜೊತೆಗೆ ಕರೆದುಕೊಂಡು ಹೋದರು. ದಾರಿಯಲ್ಲಿ, ''ನೋಡು, ದತ್ತಾತ್ರೇಯನು ತನ್ನ ಮಾಯಿಕ ಶರೀರದಿಂದ ವಿಚಿತ್ರವಾಗಿ ಕಾಣಿಸಬಹುದು. ನೀನು ಯಾವಾಗ ಅವನನ್ನು ನೋಡುವೆಯೊ, ಅವನ ಕುರಿತು ಒಂದಿಷ್ಟೂ ನಿನ್ನ ಮನಸ್ಸಿನಲ್ಲಿ ಸಂಶಯವಿರಬಾರದು. ಏಕೆಂದರೆ ಈ ಸ್ಥಳದಲ್ಲಿ ಇನ್ಯಾವ ಮಾನವನೂ ಬರುವುದಿಲ್ಲ'' ಎಂದು ಗುರುಗಳು ಏಕನಾಥನಿಗೆ ಹೇಳಿದರು. ಅವರು ಸರೋವರದಲ್ಲಿ ಸ್ನಾನ ಮಾಡಿ ತಮ್ಮ ಪೂಜೆ-ಧ್ಯಾನಗಳನ್ನು ಮುಗಿಸಿದರು. ತತ್‌ಕ್ಷಣವೆ ದತ್ತಾತ್ರೇಯನು ಒಬ್ಬ ಮುಸಲ್ಮಾನ ಫಕೀರನ ವೇಷದಲ್ಲಿ ಅವರ ಮುಂದೆ ಕಾಣಿಸಿಕೊಂಡನು! ಅವನ ದೇಹವು ಚರ್ಮದ ಬಟ್ಟೆಯಿಂದ ಹೊದೆಯಲ್ಪಟ್ಟಿತ್ತು. ಅವನ ಕಣ್ಣುಗಳು ದೊಡ್ಡದಾಗಿಯೂ ಕೆಂಪಾಗಿಯೂ ಕಂಡು ಬರುತ್ತಿದ್ದವು! ತನ್ನೊಡನೆ ಹೆಣ್ಣು ನಾಯಿಯಂತೆ ಕಾಣುವ ದೇವಲೋಕದ ಕಾಮಧೇನುವನ್ನು ತಂದಿದ್ದನು! ಜನಾರ್ದನ ಪಂತರೂ ದತ್ತಾತ್ರೇಯನೂ ಬಹಳ ಹೊತ್ತು ಆನಂದದಿಂದ ಮಾತನಾಡಿದರು. ನಂತರ ದತ್ತಾತ್ರೇಯನು ಜನಾರ್ದನನಿಗೆ ತನ್ನ ಭಿಕ್ಷಾಪಾತ್ರೆಯನ್ನು ನೀಡಿ ನಾಯಿಯ ಹಾಲನ್ನು ಕರೆದು ತರಬೇಕೆಂದು ಆಜ್ಞೆ ನೀಡಿದನು. ಒಡನೆ ಜನಾರ್ದನನು ಅದರಂತೆ ಮಾಡಲು ಇಬ್ಬರೂ ಸೇರಿ ಈಗ ದತ್ತಾತ್ರೇಯನು ತಂದಿದ್ದ ಹಳಸಿದ, ಒಣಗಿದಂತಿದ್ದ ರೊಟ್ಟಿಯನ್ನು ಹಾಲಿನಲ್ಲಿ ಅದ್ದಿ ತಿನ್ನತೊಡಗಿದರು! ನಿಜವಾಗಿಯೂ ಅದು ದೇವಲೋಕದ ಮೃಷ್ಟಾನ್ನವಾಗಿದ್ದಿತು! ಊಟವಾದ ನಂತರ ದತ್ತಾತ್ರೇಯ ಮತ್ತು ಜನಾರ್ದನರು ಆ ಪಾತ್ರೆಯಲ್ಲೇ ಕೈತೊಳೆದರು. ದತ್ತಾತ್ರೇಯನು ಏಕನಾಥನ ಗುರುಭಕ್ತಿಯನ್ನು ಪರೀಕ್ಷಿಸಲು, ''ಈ ಪಾತ್ರೆಯನ್ನು ಸರೋವರಕ್ಕೆ ತೆಗೆದು